ಅಂಬಕೇ ಇಲಾಖೆ.

ನಂ. 74—39. ತಾರೀಖು 4ನೇ ಮೇ 1887.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಶ್ರೀಮರ್ ಮಹಾರಾಜ ರಾಜಾಸಾಹೇಬ್ ಬಹದೂರವರ ಆಜ್ಞೆ ಅನುಸರಿಸಿ ಗುಬ್ಬಿ ತಾಲ್ಲೂಕು ದಂಡಿನ ಶಿವರದಲ್ಲಿ ಅಂಬಕೇ ಆಫೀಸ್ ಸ್ಥಾಪಿಸಲ್ಪಟ್ಟಿರುತ್ತೆ.

ಬಿ. ಮರಿಗಂಗೈಯ್ಯ,
ಅಂಬಕೇ ಬಕ್ಷಿ.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 270.

ಮೃತಪಟ್ಟ ಶ್ಯಾನುಭೋಗ ಚನ್ನಸಂದ್ರದ ವೆಂಕಟರಾಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ವೆಂಕಟಲಕ್ಷ್ಮಮ್ಮ, ರುಕ್ಕಮ್ಮ ಮೃತಪಟ್ಟ ಸದರೀ ಚನ್ನಸಂದ್ರದ ವೆಂಕಟರಾಯರಿಗೆ ಹೆಂಡತಿ ಮತ್ತು ಸೊಸೆ ಆಗಬೇಕೆಂಬ ಹಕ್ಕುದಾರೀ ಮೇಲೆ ಕಲ್ಲಹಳ್ಳಿ ಸ್ಥಳದ ವೆಂಕಟಲಕ್ಷ್ಮಮ್ಮ, ರುಕ್ಕಮ್ಮ ಸಹ ನಿವಾಸಿಗಳಿಷ್ಟು ತಾಲ್ಲೂಕು ಕಲ್ಲಹಳ್ಳಿ ವಾಸಸ್ಥರಾಗಿ ಮೃತಪಟ್ಟ ಚನ್ನಸಂದ್ರದ ವೆಂಕಟರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಲಕ್ಷ್ಮಮ್ಮ ಮತ್ತು ರುಕ್ಕಮ್ಮ ಇವರ ಅರ್ಜಿಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು26ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಸಂದ್ರದ ವೆಂಕಟರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಏಪ್ರೆಲ್ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ಸಹಿಯಿತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ.

ಪರೀಕ್ಷೆ.

ತಾರೀಖು 4ನೇ ಏಪ್ರೆಲ್ 1887.

1887ನೇ ಇಸವಿ ಜೂನ್ ಮಾಹೆಯಲ್ಲಿ ನಡಿಯುವ ಮೈಸೂರ್ ಲೋಕಲ್ ಸರ್ವಿಸ್ ವ ಪ್ಲೀಡರ್‌ಗಳ ಪರೀಕ್ಷೆ ವಿಷಯದಲ್ಲಿ—

ಇದರಿಂದ ಪ್ರಕಟಪಡಿಸುವದೇನಂದರೆ, ಅಸಿಸ್ಟೆಂಟ್ ಕಮ್ಮಿಷನರು, ಮುನಸಿಫರು ಅಮಲ್ದಾರರು, ಡೆಪ್ಯೂಟಿ ಅಮಲ್ದಾರರು ವ ಪ್ಲೀಡರುಗಳ ಉದ್ಯೋಗಕ್ಕಾಗಿ ವಿಧಿಸಲ್ಪಟ್ಟ ಪರೀಕ್ಷೆಗಳು, 1887ನೇ ಇಸವಿ ಜೂನ್ 13ನೇ ಮುಕ್ತಂ ಮತ್ತು ಆ ಮೂರನೇ ದಿವಸಗಳಲ್ಲಿ ಪ್ರತಿ ದಿವಸವೂ ಬೆಳಿಗ್ಯೆ 10½ ಘಂಟೆ ಲಾಗಾಯಿತು ಬೆಂಗಳೂರು ಮೊಕ್ತಾಂ ಪಬ್ಲಿಕ್ ಆಫೀಸಿನಲ್ಲಿಯು ಸೆಂಟ್ರಲ್ ಹಾಲ್‌ನಲ್ಲಿ ನಡಿಸಲ್ಪಡುವದು.

ಪರೀಕ್ಷೆಗಳು ಅಕ್ಷರಗಳಿಂದ ಗುರ್ತು ಮಾಡಲ್ಪಟ್ಟಿವೆ.

ಪ್ರತಿ ಪಾಠದ ಸವಾಲ್ ಪಟ್ಟಿಯು ಕೊಡುವ ತಾರೀಖು ವ ಘಂಟೆ ತೋರಿಸುವ ತಖ್ತೆಯು ಇದರೀ ಕಾಣಿಸಿರುತ್ತೆ. ಆಯಾ ಪರೀಕ್ಷೆಗೆ ಬರತಕ್ಕ ದರಖಾಸ್ತುದಾರರು ಆಯಾ ತಾರೀಖುಗಳಲ್ಲಿ ಹಾಜರಿರಬೇಕು.

ಅಸಿಸ್ಟೆಂಟ್ ಕಮ್ಮಿಷನರುಗಳ ಮೊಕರರಾತೀ ಬಗ್ಯೆ ಪರೀಕ್ಷೆ ..	A.
ಮುನಸಿಫರ ಡಿಟೋ ಡಿಟೋ	B.
ಅಮಲ್ದಾರ್ ವ ಡೆಪ್ಯೂಟಿ ಅಮಲ್ದಾರರ ಡಿಟೋ ಡಿಟೋ ..	C.
ಪ್ಲೀಡರುಗಳ .. ಡಿಟೋ ಡಿಟೋ ..	D.